**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :5 ಸಿಡಬ್ಲು :13

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ರಾಮಚಂದ್ರ ದ್ರೌಪದಿ ಕುರಾಡೆ |
| ತಾಯಿಯ ಹೆಸರು | : ಶ್ರೀ. ದ್ರೌಪದಿ ಕುರಾಡೆ |
| ವಯಸ್ಸು | : 63 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 12-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಈ ಪ್ರಕರಣದ ಎಲ್ಲಾ ಆರೋಪಿತರು ನನಗೆ ಪರಿಚಯ ಇರುತ್ತಾರೆ. ವಿವಾದಿತ ನಿವೇಶನ ನಂಬರ 643 ಅದು ಬಾಬನ್ನವರ ಅವರ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ.

2. ದಿನಾಂಕಃ 26-08-2017 ರಂದು ಬಾಬನ್ನವರ ಅವರು ಆಸ್ತಿ ಸಂಖ್ಯೆ643 ರಲ್ಲಿ ಕಟ್ಟಡ ಕಟ್ಟುತ್ತಿದ್ದು ಕಬ್ಬಿಣದ ಸರಳುಗಳಿಂದ ಕಾಲಂ ಹಾಕಿದ್ದರು. ನಾವು ರಸ್ತೆಯ ಮೇಲೆ ನಿಂತಿದ್ದೇವು. ಆ ಸಮಯದಲ್ಲಿ ಪ್ರಕಾಶ ಕಡಕೋಳ ಎನ್ನುವವರು ಹಳ್ಳದಲ್ಲಿ ಜಾರಿ ಬಿದ್ದರು. ಆ ಸಮಯದಲ್ಲಿ ಚಾಸಾಃ 1 ನೇಮಿನಾಥ, ಚಾಸಾಃ 4 ಶ್ರೀಕಾಂತ, ಚಾಸಾಃ 6 ಶ್ರೀಕಾಂತ, ಚಾಸಾಃ 8 ಪೊನ್ನಂಜಿ ಅವರು ಬಿದ್ದವರನ್ನು ಎತ್ತಲು ಹೋದರು, ಆ ಸಮಯದಲ್ಲಿ ಮಾದರ ಸಮುದಾಯದ ಬಸಪ್ಪ ಮಾದರ, ಶಿವನಿಂಗ ಬಾವಿಮನಿ, ವಿಠ್ಠಲ ಬುರಡಿ, ಬಸಪ್ಪ ಬುರಡಿ ಮತ್ತು ಇತರ 50 ಜನ ಸೇರಿಕೊಂಡು ಪ್ರಕಾಶ ಅವರನ್ನು ಹೊಡೆಯುತ್ತಿದ್ದಾರೆ ಎಂದು ಅಂದುಕೊಂಡು, ಬಡಿಗೆ, ಕಲ್ಲುಗಳಿಂದ ಹೊಡೆಯಲು ಪ್ರಾರಂಭಿಸಿದರು. ಕಟ್ಟಡ ಕೆಲಸ ಮಾಡಲು ಬಂದಿದ್ದ ಚಾಸಾಃ 14

ಮಿಲನ ದೇವಣ್ಣನವರ ಅವರಿಗೆ ತಲೆಗೆ ಏಟಾಯಿತು, ಚಾಸಾಃ 15 ಮಲ್ಲು ಕುರಾಡೆ ಅವರಿಗೆ ಗದ್ದಕ್ಕೆ ಏಟು ಬಿತ್ತು. ನೇಮಿನಾಥ ಅವರಿಗೆ ಬಸ್ಸಪ್ಪ ಅವರು ಕಬ್ಬಿಣದ ಸರಳಿನಿಂದ ಹೊಡೆದಿದ್ದು ಅವರಿಗೆ ತಲೆಗೆ ಗಾಯವಾಯಿತು. ಚಾಸಾಃ 8 ರವರಿಗೆ ಶಿವಲಿಂಗ ಬಾವಿಮನಿಯವರು ಕಲ್ಲಿನಿಂದ ಹೊಡೆದರು. ಜಯಪ್ಪ ಬುರಡಿ ಅವರು ಚಾಸಾಃ 7 ರವರಿಗೆ ಕಲ್ಲಿನಿಂದ ಹೊಡೆದರು.

3. ಅಲ್ಲಿದ್ದ ನಾವುಗಳು ಜಗಳ ಬಿಡಿಸಿ ಗಾಯಾಳುಗಳಿಗೆ ಆಸ್ಪತ್ರೆಗೆ ಕಳುಹಿಸಿದೇವು. ಘಟನೆಯ ಬಗ್ಗೆ ನೇಮಿನಾಥ ಅವರು ದೂರು ಕೊಟ್ಟಿದ್ದಾರೆ. ನಂತರ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ.

4. ಘಟನೆಯ ನಂತರ ಪೋಲಿಸರು ಸ್ಥಳಕ್ಕೆ ಬಂದಿದ್ದು, ಪಂಚನಾಮೆ ಮಾಡಲು ಪೋಲಿಸರಿಗೆ ನಾನೇ ಸ್ಥಳ ತೋರಿಸಿದ್ದೇನೆ. ಪಂಚನಾಮೆಯನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5 [ಎ] ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಪೋಲಿಸರು ಪೋಟೋ ತೆಗೆದಿದ್ದಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ಮತ್ತು ಕೃತ್ಯ ನಡೆದ ಸ್ಥಳವನ್ನು ಗುರುತಿಸಿದ್ದಾರೆ. ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರ ಇಲ್ಲದೇ ಇರುವುದರಿಂದ ಪೋಟೋವನ್ನು ಸಾಕ್ಷ್ಯವಾಗಿ ಗುರುತಿಸಿರುವುದಿಲ್ಲ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಆರೋಪಿತರು ವಾಸ ಇರುವ ಸ್ಥಳ ಮತ್ತು ಅದಕ್ಕೆ ಹೊಂದಿಕೊಂಡಿರುವ ವಿವಾದಿತ ಸ್ಥಳವನ್ನು ಗಾಂವಠಾಣ ಸ್ಥಳ ಎಂದು ಕರೆಯುತ್ತಾರೆ ಎನ್ನುವುದು ಸರಿ. ಆರೋಪಿತರು ವಾಸಿಸುತ್ತಿರುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಮೂಲಭೂತ ಸೌಕರ್ಯಗಳು ಇರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಮುಗಳಖೋಡ ಗ್ರಾಮ ಪಂಚಾಯತಿಯ

ಸದಸ್ಯನಾಗಿದ್ದೆ ಎನ್ನುವುದು ಸರಿ. ಮುಗಳಖೋಡ ಗ್ರಾಮವು ಪುರಸಭೆ ಆದ ನಂತರ ನನ್ನ ಸಂಬಂಧಿಕರು ಪುರಸಭೆಯ ಸದಸ್ಯರಾಗಿ ಆಯ್ಕೆ ಆಗಿದ್ದಾರೆ ಎನ್ನುವುದು ಸರಿಯಲ್ಲ.

2. ಸಾರ್ವಜನಿಕ ಆಸ್ಪತ್ರೆಯಿಂದ ವಿವಾದಿತ ಸ್ಥಳ ಸುಮಾರು 2 ಕಿಲೋಮೀಟರ ದೂರದಲ್ಲಿದೆ ಎನ್ನುವುದು ಸರಿಯಲ್ಲ, ಆದರೆ ಅರ್ಧ ಕಿಲೋಮೀಟರ ದೂರದಲ್ಲಿದೆ ಎಂದು ಸಾಕ್ಷಿ ಹೇಳಿದ್ದಾರೆ. ವಿವಾದಿತ ಸ್ಥಳದಿಂದ ನಮ್ಮ ಮನೆ ಎರಡು ಕಿಲೋಮೀಟರ ದೂರದಲ್ಲಿದೆ.

3. ಪ್ರಕಾಶ ಅವರು ಕಲ್ಲು ಜಾರಿ ಬಿದ್ದ ವಿಚಾರವನ್ನು ನಾನು ಡಿ.ವೈ.ಎಸ್.ಪಿ ಅವರ ಮುಂದೆ ಹೇಳಿದ್ದೇನೆ. ನಾನು ಮತ್ತು ನನ್ನ ಸಂಬಂಧಿಕರು ಚುನಾವಣೆಯಲ್ಲಿ ಗೆಲ್ಲಲು ಬಾಬನ್ನವರ ಕುಟುಂಬದವರು ನಮಗೆ ಸಹಾಯ ಮಾಡಿದ್ದು, ಆರೋಪಿತರು ನಮಗೆ ವಿರೋಧ ಮಾಡಿದ್ದರಿಂದ ನಾನು ಬಾಬನ್ನವರ ಕುಟುಬಂದವರ ಪರವಾಗಿ ಹಾಗೂ ಆರೋಪಿತರ ವಿರುದ್ಧವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

4. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಬಾಬನ್ನವರ ಕುಟುಂಬಕ್ಕೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಘಟನೆ ನಡೆದ ಸ್ಥಳವನ್ನು ಪಂಚನಾಮೆ ಮಾಡಲು ಪೋಲಿಸರಿಗೆ ನಾನೇ ತೋರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು:5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ಶ್ರೀ.ಹೆಚ್.ಸಿ.ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.